ದಿನಾಂಕ ಃ **02-04-2019** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ. ಆರ್. ಎ ಪ್ರತಿವಾದಿ ವಕೀಲರಿಂದಃ

ಮಧನಭಾವಿ ಹಾಗೂ ನೇಸರಗಿ ಗ್ರಾಮದಲ್ಲಿ ಖರೀದಿ ಆಗಿರುವ ದಾವಾ ಆಸ್ತಿಗಳ ಬಗ್ಗೆ ನನ್ನ ಹೆಸರಿಗೆ ಯಾವುದೇ ಖರೀದಿ ಪತ್ರ ಇಲ್ಲ. ಈ ಆಸ್ತಿಗಳು ಖರೀದಿ ಮಾಡುವ ಸಮಯದಲ್ಲಿ ಹಣ ಕೊಟ್ಟಿದ್ದಿರಾ ಎಂದರೆ ಸಾಕ್ಷಿ ನನಗೆ ಆಸ್ತಿ ಖರೀದಿ ಮಾಡುವ ಬಗ್ಗೆ ಅವರು ಹೇಳಲಿಲ್ಲ ಹಾಗೂ ಕೇಳಲಿಲ್ಲ ಎಂದು ಹೇಳುತ್ತಾರೆ. ನೇಸರಿಗೆ ಗ್ರಾಮದಲ್ಲಿ ಇರುವ ಪ್ಲಾಟ ನಂ.1147/6, 2 ನೇ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಹೌದು. ದಾವಾ ಮಾಡುವ ಕಾಲಕ್ಕೆ ಪ್ಲಾಟ ನಂ.1147/6, 2 ನೇ ಪ್ರತಿವಾದಿ ಹೆಸರು ಕಡಿಮೆ ಮಾಡಿ 3 ಮತ್ತು 4 ನೇ ಪ್ರತಿವಾದಿಯ ಹೆಸರು ನಮೂದು ಆಗಿರುತ್ತದೆ ಎಂದರೆ ಸಾಕ್ಷಿ ಅವರು ನಮೂದು ಮಾಡಿಕೊಂಡಿರಬಹುದು ಎಂದು ಹೇಳುತ್ತಾರೆ. 2 ರಿಂದ 4 ನೇ ಪ್ರತಿವಾದಿ ಅವರ ಹೆಸರು ಪ್ಲಾಟ ನಂ.1147/6 ಗೆ ಅವರು ಹೆಸರು ಮಾಡಿಕೊಳ್ಳುವಾಗ ನಾನು ತಕರಾರು ಮಾಡಲಿಲ್ಲ ಕಾರಣ ನನಗೆ ಅವರು ಅವರ ಹೆಸರು ದಾಖಲಾತಿ ಮಾಡಿಕೊಳ್ಳುವಾಗ ಕೇಳಲಿಲ್ಲ ಹಾಗೂ ನನಗೆ ಗೊತ್ತಿರುವುದಿಲ್ಲ ಎಂದು ಹೇಳಲುತ್ತಾರೆ. ಮಧನಭಾವಿ ಗ್ರಾಮದಲ್ಲಿ ಇವರು ಜಿ.ಪಿ ನಂ.55/ಡಿ ಆಸ್ತಿ ರುದ್ರವ್ವಾ ಶಿವಪೂಜಿಮಠ ಇವರ ಆಸ್ತಿ ಮೊದಲು ಆಗಿತ್ತು ಎಂದರೆ ಹೌದು. ಈ ಆಸ್ತಿ ಕೂಡ 2 ನೇ ಪ್ರತಿವಾದಿ ಹೆಸರಿನಲ್ಲಿ ಖರೀದಿ ಆಗಿದೆ ಎಂದರೆ ಅವರು ಮಾಡಿಕೊಂಡರು ಎಂದು ಹೇಳುತ್ತಾರೆ. ಖರೀದಿ ಆಗುವ ಮೊದಲು 55/ಸಿ ಅಂತಾ ಇತ್ತು ಖರೀದಿ ಆದ ನಂತರ 55/ಡಿ ಅಂತಾ ನಂಬರ ಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ಪ್ಲಾಟ ನಂ.1147/6 ಹಾಗೂ 55/ಡಿ ಈ ಆಸ್ತಿಗಳು 2 ನೇ ಪ್ರತಿವಾದಿಯ ಸ್ವಯಾರ್ಜಿತ

ಆಸ್ತಿಗಳು ಎಂದರೆ ಸರಿಯಲ್ಲ. ಈ ಎರಡೂ ಆಸ್ತಿಗಳಲ್ಲಿ ನನಗೆ ಮತ್ತು 1 ನೇ ಪ್ರತಿವಾದಿಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ಮೂಲ ಕೆಲಸ ಒಕ್ಕಲೂತನ ಎಂದರೆ ನನಗೆ ಗೊತ್ತಿಲ್ಲ. ವಾಟ್ನಿ ಆದ ನಂತರ 1 ನೇ ಪ್ರತಿವಾದಿ ತುಂಬಾ ಗಳಿಸಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ 5 ಮತ್ತು 6 ನೇ ಪ್ರತಿವಾದಿಯರು ಮಕ್ಕಳು ಎಂದರೆ ಹೌದು. 5 ನೇ ಪ್ರತಿವಾದಿ ನೌಕರಿ ಮಾಡುತ್ತಾನೆ ಎಂದರೆ ಹೌದು. ಮಧನಭಾವಿಯಲ್ಲಿ ಇದ್ದ ಆಸ್ತಿ ಮೊದಲು ಮಲ್ಲಮ್ಮನವರ ಆಸ್ತಿ ಎಂದರೆ ಸಾಕ್ಷಿ ಕೂಡಿ ಇದ್ದಾಗ ಖರೀದಿ ಮಾಡಿದ ಆಸ್ತಿ ಎಂದು ಹೇಳುತ್ತಾರೆ. ಅದು 5 ನೇ ಪ್ರತಿವಾದಿ ಹೆಸರಿನಲ್ಲಿ ಖರೀದಿ ಮಾಡಿ ಖೀರಿದಿ ಪತ್ರ ಆಗಿದೆ ಎಂದರೆ ಅವರು ಮಾಡಿಕೊಂಡಿರಬಹುದು ಎಂದು ಹೇಳುತ್ತಾರೆ . ಸದರಿ ಆಸ್ತಿ 5 ನೇ ಪ್ರತಿವಾದಿ ತನಗೆ ಬರುವ ಸಂಬಂಳದಿಂದ ಕೂಡಿ ಇಟ್ಟ ಹಣದಿಂದ ಖರೀದಿ ಮಾಡಿರುವ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿ ಖೀರಿದಿ ಮಾಡುವಾಗ ನಾನು ಹಣ ಕೊಟ್ಟ ಬಗ್ಗೆ ದಾಖಲಾತಿ ಇಲ್ಲ. 1 ಮತ್ತು 2 ನೇ ಪ್ರತಿವಾದಿ ಖರೀದಿ ಮಾಡಿರುವ ಸಮಯದಲ್ಲಿ ನಮ್ಮದು ಏಕತ್ರ ಕುಟುಂಬ ಇತ್ತು ಅನ್ನುವ ಬಗ್ಗೆ ದಾಖಲಾತಿ ಇದೆಯಾ ಎಂದರೆ ಅವರಿಗೆ ಗೊತ್ತು ಎಂದು ಹೇಳುತ್ತಾರೆ. ಗ್ರಾಮ ಪಂಚಾಯತಿ ಆಸ್ತಿ ನಂ.370/8, 5 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಖರೀದಿ ಕಾಲಕ್ಕೆ ಸದರಿ ಗ್ರಾಮ ಪಂಚಾಯತಿ ಆಸ್ತಿ ನಂ.370/8 ಹಳೆ ಮನೆ ಇತ್ತು ಎಂದರೆ ಹೌದು. ಈಗ ಅದು **RCC Building** ಆಗಿದೆ ಎಂದರೆ ಹೌದು. **RCC Building** ಕಟ್ಟಲು 5 ನೇ ಪ್ರತಿವಾದಿ ತಾನೂ ಕೂಡಿ ಇಟ್ಟ ಸಂಬಂಳದ ಹಣದಿಂದ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ಲಾಟ ನಂ.1147/6, 55/ಡಿ ಹಾಗೂ 370/8 ಈ ಆಸ್ತಿಗಳು ನನ್ನ ಸ್ವಾಧೀನದಲ್ಲಿ ಎಂದೂ ಇಲ್ಲ ಎಂದರೆ ಸರಿಯಲ್ಲ.

ನಮ್ಮದು **KA24-T4502** ಅಂತಾ **Tractor** ಇದೆ ಎಂದರೆ ಹೌದು. ಆ **Tractor** ನನ್ನ ಹೆಸರಿನಲ್ಲಿ ಖರೀದಿ ಆಗಿದೆ ಎಂದರೆ ಹೌದು. ಆ **Tractor** ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಹೌದು. 1982 ರಲ್ಲಿ ನನ್ನ ಮತ್ತು 1 ಹಾಗೂ 2 ನೇ ಪ್ರತಿವಾದಿ ನಡುವೆ ವಿಭಾಗ ಆಗಿದೆ ಎಂದರೆ ಸರಿಯಲ್ಲ. ನಾನೂ ಕಬೂಲಿ ಕೊಟ್ಟ ಪ್ರಕಾರ ನನ್ನ ಹೆಸರಿಗೆ ಆಸ್ತಿಗಳನ್ನು ಬೇರೆ ದಾಖಲೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1 ಹಾಗೂ 2 ನೇ ಪ್ರತಿವಾದಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ಈ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಬಾಬಾಗೌಡ ಮನೆತನದ ಯಜಮಾನಕಿ ಮಾಡುತ್ತಾ ಇದ್ದರೂ ಅಂತಾ ಹೇಳಿದ ಬಗ್ಗೆ ಎಂದೂ ಸಹ ಅವರು ಮನೆತನದ ಹಿರೆತನ ಮಾಡಿಲ್ಲ ಎಂದರೆ ಸರಿಯಲ್ಲ. ಅವರ ಮೇಲೆ ಒಂದು ಖೋಟ್ಟಿ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ

(ಚೈತ್ರಾ ಎ. ಎಮ್.)
ಪ್ರ ದ ನ್ಯಾ ದಂ, ಬೈಲಹೊಂಗಲ